ಅಸಲು ದಾವಾ ನಂ:**36/2023**
ಡಿ ಡಬ್ಲ್ಯೂ:**01**

<u>ದಿನಾಂಕ:**18/08/2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲು: ವಾದಿ ಪರ ಶ್ರೀ ಜಿ ಎಂ ವಿ ವಕೀಲರಿಂದ:</u>

ಸಾಕ್ಷಿಗೆ ನಿಪಿ 1 ಅನ್ನು ತೋರಿಸಲಾಗಿ ನಿಪಿ 1 ರಂತೆ ನಾನು ವಾದಿಯ ಜೊತೆ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಕೇವಲ 1 ಎಕರೆ 14 ಗುಂಟೆ ಮಾಡಿಕೊಂಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಕರಾರು ಪತ್ರದಲ್ಲಿ 1 ಎಕರೆ 20 ಗುಂಟೆ ಒತ್ತುವರಿ ಜಾಗ ಕರಾರು ಪತ್ರದಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿ. ನಾನು ಸದರಿ ಎರಡು ಆಸ್ತಿಗಳನ್ನು ಸೇರಿ ಬೇಲಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಕರಾರು ಪತ್ರದಲ್ಲಿ ನೋಂದಣಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಒದಗಿಸಿಕೊಡಬೇಕೆಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಎಲ್ಲಾ ದಾಖಲೆಗಳನ್ನು ಒದಗಿಸಿದ್ದೆ ಎಂದು ಉತ್ತರಿಸಿರುತ್ತಾರೆ. ನಾನು ಬ್ಯಾಂಕಿಗೆ ಸಂಬಂಧಿಸಿದ ಆಧಾರ್ ಖುಲಾಸೆ ಪತ್ರ ಮೂಲ ದಾಖಲೆ ಕೊಟ್ಟಿದುದ ಉಳಿದವುಗಳನ್ನು ಜೆರಾಕ್ಸ್ ಪ್ರತಿ ಕೊಟ್ಟಿರುತ್ತೇನೆ. ನಾನು ಹಕ್ಕು ಬಾದ್ಯತೆಗೆ ಸಂಬಂದಪಟ್ಟಂತೆ ಮ್ಯೂಟೇಶನ್, ಪಹಣಿ, ಎನ್ ಓ ಸಿ, ವಿಲ್ ಹಾಗೂ ಮಂಜೂರಾತಿ ಪತ್ರ ಕೊಟ್ಟಿರುತ್ತೇನೆ.

2. ನನಗೆ 1975-76 ರಲ್ಲಿ ಆಸ್ತಿಗೆ ಸಂಬಂದಪಟ್ಟಂತೆ ಮಂಜೂರಾತಿ ಪತ್ರ ಕೊಟ್ಟಿರುತ್ತಾರೆ. ನಾನು ಮಂಜೂರಾತಿಗೆ ಸಂಬಂದಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾರಜುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಅವರಿಗೆ ಕೊಟ್ಟಿದ್ದೆ ಎಂದು ಉತ್ತರಿಸಿರುತ್ತಾರೆ. ನಾನು ಮಂಜೂರಾತಿ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆದರೆ ನನ್ನ ಬಳಿ ಸದರಿ ದಾಖಲೆ ಇರುತ್ತದೆ. ದಾವಾ ಸ್ವತ್ತು 1 ನನ್ನ ಅಜ್ಜನಿಗೆ ಮಂಜೂರಾಗಿದ್ದು, ಸದರಿ ಆಸ್ತಿಯನ್ನು ಬಿಟ್ಟು ಉಳಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ನಾನು ನಮ್ಮ ಅಜ್ಜ ಮಾಡಿಕೊಂಡ ವಿಭಾಗ ಪತ್ರವನ್ನು ವಾದಿಗೆ ಕೊಟ್ಟಿರುವುದಿಲ್ಲ. ಸದರಿ ದಾಖಲೆಗಳನ್ನು ನಾನು ಕರಾರು ಆಗುವ ಪೂರ್ವದಲ್ಲಿ ಕೊಟ್ಟಿರುತ್ತೇನೆ. ನಾನು ಮೂಲ ದಾಖಲೆಗಳನ್ನು ಬ್ಯಾಂಕಿಗೆ ಅಡಮಾನ ಮಾಡಿ ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಿಪಿ 1 ಕರಾರು ಪತ್ರದಲ್ಲಿ ನಾನು ಯಾವ್ಯಾವ ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂಬುದರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಸಾಲವನ್ನು ತೀರಿಸಿದ ನಂತರ ದಾಖಲೆಗಳನ್ನು ಒದಗಿಸಬೇಕು ಎಂದು ನಮೂದು ಇರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರಿದು ನಂತರ ಅವರು

ಯಾವುದೇ ದಾಖಲೆಗಳನ್ನು ಕೇಳಿರುವುದಿಲ್ಲ ಹಾಗೂ ನಾನು ಮೊದಲೇ ದಾಖಲೆಗಳನ್ನು ನೀಡಿದ್ದು, ಸಾಲ ತೀರಿಸಿದ ನಂತರ ಇ ಸಿ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

3. ನಿಪಿ 1 ಕರಾರು ಪತ್ರ ಆಗುವ ಕಾಲಕ್ಕೆ ನಾನು ಕೇವಲ ಮ್ಯೂಟೇಶನ್ ಮತ್ತು ಪಹಣಿಯನ್ನು ನೀಡಿರುತ್ತೇನೆ ಎಂದರೆ ಸಾಕ್ಷಿ ನಾನು ಎಲ್ಲಾ ದಾಖಲೆ ನೀಡಿದ್ದು ನಂತರ ಅವರು ಯಾವುದೇ ದಾಖಲೆ ಕೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ಆರ್ ಆರ್ ಇಂಡೆಕ್ಸ್, ಟಿಪ್ಪಣಿ ಹಾಗೂ ಮಂಜೂರಾತಿ ಪತ್ರ ನನ್ನ ಬಳಿ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಮಾರಾಟ ಮಾಡುವ ಸಂಬಂದ ತಹಶೀಲ್ದಾರ್ ರವರಿಂದ ಎನ್ ಓ ಸಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ವಕೀಲರ ಮುಖಾಂತರ ಕಳುಹಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಜನವರಿ 2023 ರಲ್ಲಿ ಎನ್ ಓ ಸಿ ಅನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಮುಂದುವರಿದು ಮೊದಲಿಗೆ ಪಡೆದ ಎನ್ ಓ ಸಿ ದಿನಾಂಕ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಇ ಸಿ ಮತ್ತು ಎನ್ ಓ ಸಿ ದಾಖಲೆಯನ್ನು ವಕೀಲರ ಮುಖಾಂತರ ಕಳುಹಿಸಿಕೊಟ್ಟ ಬಗ್ಗೆ ದಾಖಲೆಯನ್ನು ಇಟ್ಟುಕೊಂಡಿರುವುದಿಲ್ಲ. ನಾನು ನಮ್ಮ ವಕೀಲರ ಮುಖಾಂತರ ಯಾವುದೇ ದಾಖಲೆಯನ್ನು ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

4. ದಿಃ 09/01/2023 ರಂದು ವಾದಿಯು ತಮ್ಮ ವಕೀಲರ ಮುಖಾಂತರ ದಾಖಲೆಗಳನ್ನು ನೀಡುವಂತೆ ನೋಟೀಸು ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ನಾನು ದಿಃ 29/12/2022 ರಂದು ನಾನು ಕರಾರಿನ ಅವಧಿ ಮುಗಿದಿದೆ ಅದನ್ನು ರದ್ದುಗೊಳಿಸಿರುವಂತೆ ನೋಟೀಸು ಕಳುಹಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಆ ಕಾಲಕ್ಕೆ ತಹಶೀಲ್ದಾರ್ ರವರಿಂದ ಎನ್ ಓ ಸಿ ಪಡೆಯದ ಕಾರಣ ಕರಾರು ರದ್ದುಗೊಳಿಸಲು ಬರುವುದಿಲ್ಲ ಎಂದರೆ ಸಾಕ್ಷಿ ನಾನು ಅದಕ್ಕಿಂತ ಪೂರ್ವದಲ್ಲಿ ಅವರಿಗೆ ಸದರಿ ದಾಖಲೆಯನ್ನು ಕೊಟ್ಟಿದ್ದೆ ಎಂದು ಉತ್ತರಿಸಿರುತ್ತಾರೆ. ಕರಾರಿನ ಅವಧಿಯೊಳಗೆ ವಿಧಾನಸಭಾ ಚುನಾವಣಾ ಬಂದ ಕಾರಣ ನಾನು ಮತ್ತು ವಾದಿ ಮಾತನಾಡಿಕೊಂಡು ಕ್ರಯ ಪತ್ರ ಮಾಡುವುದನ್ನು ಮುಂದಕ್ಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಚುನಾವಣೆ ಆದ ನಂತರ ವಾದಿ ಪದೇ ಪದೇ ಕೇಳಿದರೂ ನಾನು ಕ್ರಯ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಚುನಾವಣೆ

ಪೂರ್ವದಲ್ಲಿಯೇ ನಾನು ಸಾಕಷ್ಟು ಬಾರಿ ಅವರನ್ನು ಕರೆದಿರುತ್ತೇನೆ ಆದರೆ ಅವರೇ ಬಂದಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

5. ದಿಃ05/03/2023 ರಂದು ವಾದಿಯು ಕ್ರಯ ಪತ್ರ ಬರೆದುಕೊಡುವಂತೆ ನನಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 29/12/2022 ರಂದು ನಾನು ನೋಟೀಸು ನೀಡುವ ಕಾಲಕ್ಕೆ ವಾದಿಗೆ ಒದಗಿಸಬೇಕಾದ ದಾಖಲೆಗಳನ್ನು ನೀಡದೇ ಇದ್ದ ಕಾರಣ ಕ್ರಯ ಪತ್ರ ಮಾಡಿಕೊಳ್ಳಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 05/03/2023 ರ ನೋಟೀಸಿಗೆ ನಾನು ದಿಃ 27/03/2023 ರಂದು ಪ್ರತ್ಯುತ್ತರ ನೀಡಿರುತ್ತೇನೆ ಎಂದರೆ ಸರಿ. ನಾನು ಎನ್ ಓ ಸಿ ದಾಖಲೆಯನ್ನು ವಾದಿಗೆ ನೀಡಿದ ನಂತರ ಕ್ರಯ ಪತ್ರ ಮಾಡಿಕೊಳ್ಳುವಂತೆ ನೀವೇನಾದರೂ ನೋಟೀಸು ನೀಡಿದ್ದೀರಾ ಎಂದರೆ ಸಾಕ್ಷಿ ನಾನು ಮೊದಲೇ ಕರಾರು ರದ್ದು ಪಡಿಸುವಂತೆ ನೋಟೀಸು ಕೊಟ್ಟಿದ್ದೆ ಎಂದು ಉತ್ತರಿಸಿರುತ್ತಾರೆ. ದಿಃ 29/12/2022 ರಂದು ನೋಟೀಸು ಕೊಡುವ ಕಾಲಕ್ಕೆ ನಾನು ವಾದಿಗೆ ಎಲ್ಲಾ ದಾಖಲೆಗಳನ್ನು ಈ ಮೊದಲೇ ಒದಗಿಸಿರುವ ಬಗ್ಗೆ ತಿಳಿಸಿರುತ್ತೇನೆ.

6. ನಿಡಿ 2 ರಲ್ಲಿ ನಾನು ಯಾವ್ಯಾವ ದಾಖಲೆಗಳನ್ನು ವಾದಿಗೆ ನೀಡಿರುತ್ತೇನೆ ಎಂಬುದರ ಬಗ್ಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ ಆದರೆ ಈ ಮೊದಲೇ ದಾಖಲೆಗಳನ್ನು ನೀಡಿದ್ದೇವು ಎಂದು ಉತ್ತರಿಸಿರುತ್ತಾರೆ. ನಾನು ಈ ಮೊದಲೇ ಎಲ್ಲಾ ದಾಖಲೆಗಳನ್ನು ಒದಗಿಸಿರುತ್ತೇನೆ, ಕ್ರಯ ಪತ್ರ ಮಾಡಿಕೊಳ್ಳುವಂತೆ ನೋಟೀಸು ಕೊಟ್ಟಿರುವುದಿಲ್ಲ ಆದರೆ ಬಾಯಿ ಮಾತಿನ ಮೂಲಕ ಕೇಳಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಕರಾರು ಪತ್ರ ಆದ ನಂತರ ಚುನಾವಣೆ ಇರಲಿಲ್ಲ ಆದರೆ ನಾನು ಕರಾರು ಪತ್ರ ರದ್ದು ಪಡಿಸುವಂತೆ ನೋಟೀಸು ಕೊಟ್ಟ ನಂತರ ಚುನಾವಣೆ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಕರಾರು ಪತ್ರದಂತೆ ಆದ ಮೊತ್ತವನ್ನು ಹೊರತುಪಡಿಸಿ ಹೆಚ್ಚಿಗೆ ಹಣ ನೀಡುವಂತೆ ಮದ್ಯದಲ್ಲಿ ಯಾವತ್ತೂ ಕೇಳಿರುವುದಿಲ್ಲ. ಕರಾರು ಪತ್ರ ಆದ 4-5 ಬಾರಿ ನಾನು ಮತ್ತು ವಾದಿ ಬೇಟಿಯಾಗಿರುತ್ತೇವೆ. ವಾದಿ ದಾವಾ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡುವ ಬಗ್ಗೆ ನನ್ನ ಮುಂದೆ ಹೇಳಿರುತ್ತಾರೆ, ನಾನು ಬೇರೆ ಯಾರಿಗಾದರೂ ಮಾರಾಟ ಮಾಡುವುದಾದರೇ ಮಾಡಿ ಎಂದು ಹೇಳಿರುತ್ತೇನೆ.

7. ನಿಪಿ 1 ರಲ್ಲಿ ಅವರು ಕೇಳಿದಂತಹ ದಾಖಲೆಗಳನ್ನು ಕೊಡಬೇಕು ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಕೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಕರಾರು ಆಗುವ ಕಾಲಕ್ಕೆ ವಾದಿಗೆ ದಾಖಲೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 24/08/2022 ರಂದು ನಾನು ಬ್ಯಾಂಕಿನಿಂದ ಖುಲಾಸೆ ಪತ್ರ ಮಾಡಿಸಿಕೊಂಡಿರುತ್ತೇನೆ. ನಂತರ ನಾನು ವಾದಿಗೆ ಸದರಿ ಖುಲಾಸೆ ಮಾಡಿಕೊಂಡ ಬಗ್ಗೆ ಖುದ್ದಾಗಿ ದಾಖಲೆಯನ್ನು ನೀಡಿರುತ್ತೇನೆ. ನಾನು ದಾಖಲೆಗಳನ್ನು ವಾದಿಗೆ ಖುದ್ದಾಗಿ ಕೊಟ್ಟ ಬಗ್ಗೆ ಕರಾರು ಪತ್ರದಲ್ಲಿ ಹಿಂಬರಹ ಪಡೆದುಕೊಂಡಿರುವುದಿಲ್ಲ. ನಾನು ಖುದ್ದಾಗಿ ವಾದಿಗೆ ದಾಖಲೆ ಕೊಟ್ಟ ಸಂಬಂದ ನನ್ನ ಬಳಿ ದಾಖಲೆ ಇರುವುದಿಲ್ಲ. ಕರಾರು ಪತ್ರದಲ್ಲಿ ಆರ್ ಆರ್ ಇಂಡೆಕ್ಸ್, ಸಾಗುವಳಿ ಚೀಟಿ, ಟಿಪ್ಪಣಿ ಕಾಪಿ ಹಾಗೂ ಸರ್ವೆ ಸ್ಕೆಚ್ ಕೊಟ್ಟ ಬಗ್ಗೆ ನಮೂದು ಇರುವುದಿಲ್ಲ.

8. ನಿಪಿ 1 ರ ಕ್ರಮ ಸಂಖ್ಯೆ 11 ರಲ್ಲಿ ನಮೂದಿಸಿದಂತೆ ದಾಖಲೆ ಕೊಡುವ ಬಗ್ಗೆ ಒಪ್ಪಿಕೊಂಡಿದ್ದೆ ಎಂದರೆ ಸರಿ. ನಿಪಿ 1 ಕರಾರು ಆಗುವ ಕಾಲಕ್ಕೆ ನಾನು ವಾದಿಗೆ ಕೊಟ್ಟ ದಾಖಲೆ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ನಮ್ಮ ಅಜ್ಜನಿಗೆ ಆಸ್ತಿ ಮಂಜೂರಾದ ಬಗ್ಗೆ ಕರಾರು ಆಗುವ ಕಾಲಕ್ಕೆ ನಾನು ಸಾಗುವಳಿ ಚೀಟಿಯನ್ನು ಕೊಟ್ಟಿರುತ್ತೇನೆ. ಕರಾರಿನಲ್ಲಿ ಸಾಗುವಳಿ ಚೀಟಿ ನಂಬರನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅವರೇ ಕರಾರು ಪತ್ರವನ್ನು ಬರೆಸಿಕೊಂಡು ತಯಾರಿಸಿಕೊಂಡು ಬಂದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಕರಾರು ಪತ್ರವನ್ನು ನಾನು ಕಾಂತರಾಜ್ ಎನ್ನುವವರ ಕಡೆಯಿಂದ ತಯಾರಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಕರಾರು ಪತ್ರವನ್ನು ಓದಿರುತ್ತೇನೆ. ನಾನು ಕರಾರು ಪತ್ರದಲ್ಲಿ ನಾನು ಕೊಟ್ಟ ದಾಖಲೆಯನ್ನು ನಮೂದು ಮಾಡದೇ ಇರುವ ಬಗ್ಗೆ ಕೇಳಿರುವುದಿಲ್ಲ. ದಿಃ 05/03/2023 ರ ನೋಟೀಸಿನಲ್ಲಿ ವಾದಿಯು ಎನ್ ಓ ಸಿ ಯನ್ನು ಹಾಜರುಪಡಿಸುವಂತೆ ತಿಳಿಸಿರುತ್ತಾರೆ ಎಂದರೆ ಸರಿ. ದಿಃ 09/01/2023 ರ ನೋಟೀಸಿಗೆ ನಾನು ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ ಎಂದರೆ ಸರಿ. ದಿಃ 27/03/2023 ರಂದು ನಮ್ಮ ವಕೀಲರ ಮೂಲಕ ನೋಟೀಸು ಕಳುಹಿಸಿದ್ದು ನಾನು ದಾಖಲೆಯನ್ನು ನೀಡಿದ ಸಂಬಂದ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರ ಮೂಲಕ ಕಳುಹಿಸಿದ್ದೆ ಎಂದು ಉತ್ತರಿಸಿರುತ್ತಾರೆ. ದಿಃ 27/12/2022 ರ ನಾವು ನೀಡಿದ ನೋಟೀಸು ನಂತರ ಯಾವುದೇ ದಾಖಲೆಯನ್ನು ವಾದಿಗೆ ಕಳುಹಿಸಿರುವುದಿಲ್ಲ ಎಂದರೆ ಸರಿ. ದಿಃ 05/03/2023 ರಂದು ವಾದಿ ಕ್ರಯಪತ್ರ ಮಾಡಿಕೊಡುವಂತೆ ನನಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಈ ಮೊದಲೇ ಜಾಗವನ್ನು ಮಾರುವುದಿಲ್ಲ ಎಂದು ಹೇಳಿದ್ದೆ ಎಂದು ಉತ್ತರಿಸಿರುತ್ತಾರೆ.

9. ನಾನು ಕರಾರು ಪತ್ರವನ್ನು ಮೋಸ ಮಾಡುವ ಉದ್ದೇಶದಿಂದ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ವಾದಿ ಆಸ್ತಿಯನ್ನು ಖರೀದಿಸಲು ಬಂದಾಗ ಪರಿಚಯ ಇರುತ್ತಾರೆ. ನಿಡಿ 1 ದಾಖಲೆಯನ್ನು ಯಾಕೋಬ್ ಎನ್ನುವವರು ವಿಚಾರಿಸಿದಾಗ ಅವರು ಉಮೇಶ್ ರವರು ನನ್ನ ಆಸ್ತಿಯನ್ನು ಸಹ ತೆಗೆದುಕೊಂಡು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದು ತಿಳಿಸಿದರು. ನಿಡಿ 1 ಆಸ್ತಿಗೆ ಸಂಬಂದಪಟ್ಟಂತೆ ವಾದಿ ನಡುವೆ ಯಾವುದೇ ಕರಾರು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 2 ದಾಖಲೆಯನ್ನು ಅಕ್ರಮ ಹಣ ಗಳಿಸುವ ಸಲುವಾಗಿ ನೀಡಿದ ನೋಟೀಸು ಇರುತ್ತದೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯ್ತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ :